**ದಿನಾಂಕ: 20.03.2021 ರಂದು ವಾರ್ಡ್ ಸಂಖ್ಯೆ 184 ಉತ್ತರಹಳ್ಳಿ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡಾವಳಿಗಳು.**

*ಹಾಜರಿದ್ದ ಅಧಿಕಾರಿಗಳು:-*

1. ಶ್ರೀಮತಿ ಚೈತ್ರಾ ಹೊನ್ನಾಪುರ- ವಾರ್ಡ್ ಸಮಿತಿ ನೋಡಲ್ ಅಧಿಕಾರಿ
2. ಶ್ರೀ ನರೇಂದ್ರ ಕುಮಾರ್.ಎ - ಸಹಾಯಕ ಅಭಿಯಂತರರು ಮತ್ತು ಸಂಚಾಲಕರು (ವಾರ್ಡ್ 184 ಉತ್ತರಹಳ್ಳಿ)
3. ಶ್ರೀ ಚೇತನ್.ಎಲ್ - ಸಹಾಯಕರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆ
4. ಶ್ರೀ ಶಶಿಕುಮಾರ್ - ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ಸಂಖ್ಯೆ 184
5. ಶ್ರೀ ವೆಂಕಟೇಶ್ - ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
6. ಶ್ರೀ ಬಾಬು - ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
7. ಶ್ರೀ ಶಿವರಾಜು - ಮೇಲ್ವಿಚಾರಕರು, ಘನತ್ಯಾಜ್ಯ ನಿರ್ವಹಣೆ
8. ಶ್ರೀ ಸಿದ್ದರಾಜು - ಮೇಲ್ವಿಚಾರಕರು, ಬೀದಿ ದೀಪಗಳು, ಬಿ.ಬಿ.ಎಂ.ಪಿ
9. ಡಾ.ಸುಧಾಕರ್.ಆರ್.ಕೆ - ಪಿ.ಹೆಚ್.ಸಿ, ಉತ್ತರಹಳ್ಳಿ ವಾರ್ಡ್

*ಹಾಜರಿದ್ದ ಸಮಿತಿ ಸದಸ್ಯರು:-*

1. ಶ್ರೀ ಮೇಘರಾಜ್ ಕರೂರ್-ಫಾರ್ಮ್ ಸ್ಪ್ರಿಂಗ್ ಲೇಔಟ್ RWA
2. ಶ್ರೀ ಪೃಥ್ವಿರಾಜ್ ಕರೂರ್ – ಫಾರ್ಮ್ ಸ್ಪ್ರಿಂಗ್ RWA
3. ಶ್ರೀ ಅಮರ್.ಎಂ.ಆರ್ - ಎ.ಜಿ.ಎಸ್ ಬಡಾವಣೆ RWA
4. ಶ್ರೀ ಅರುಣ್ – ಎ.ಜಿ.ಎಸ್ ಬಡಾವಣೆ RWA
5. ಶ್ರೀ ಸುನೀಲ್ ಪೊನ್ನಣ್ಣ – ಜಯನಗರ ಹೌಸಿಂಗ್ ಬಡಾವಣೆ RWA
6. ಶ್ರೀ ಸುದೀಂದ್ರ.ಎಸ್.ಕೆ - ಪೂರ್ಣಪ್ರಜ್ಞಾಲೇಔಟ್, RWA

ಮೇಲೆ ಹಾಜರಿದ್ದ ಸಮಿತಿ ಸದಸ್ಯರ ಹಾಗೂ ಅಧಿಕಾರಿಗಳ ಸಮ್ಮುಖದಲ್ಲಿ ವಾರ್ಡ್ ಸಮಿತಿ ನೋಡಲ್ ಅಧಿಕಾರಿಯಾದ ಶ್ರೀಮತಿ ಚೈತ್ರಾ ಹೊನ್ನಾಪುರ ರವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಾ, ಸಭೆ ಸೇರಿರುವ ಉದ್ದೇಶ ಮತ್ತು ಸಭೆಯ ಮಹತ್ವವನ್ನು, ಸದಸ್ಯರ ಮುಖ ಪರಿಚಯದೊಂದಿಗೆ ವಿವರಿಸುತ್ತಾ, ಹಾಜರಿದ್ದ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ಸ್ವಾಗತ ಕೋರಿದರು.

ಸದರಿ ಸಭೆಯಲ್ಲಿ ಈ ಕೆಳಕಂಡಂತೆ ವಿವಿಧ ವಿಷಯಗಳ ಬಗ್ಗೆ ವಾರ್ಡ್ ಸಮಿತಿಯು ವಿವರವಾಗಿ ಚರ್ಚಿಸಿದಂತೆ ಮುಂದಿನ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಅಧಿಕಾರಿ / ಇಲಾಖೆಗಳಿಗೆ ಸೂಚಿಸಲಾಗಿರುತ್ತದೆ.

1. **ಬೆಂಗಳೂರು ನೀರು ಮತ್ತು ಒಳಚರಂಡಿ ಇಲಾಖೆಗೆ ಸಂಬಂಧಪಟ್ಟಂತೆ**
   - 80 ಅಡಿ ರಸ್ತೆ ಮತ್ತು ಚಾಟರ್ಡ್ ಬ್ರೇವರ್ಲೀ ಅಪಾರ್ಟ್‌ಮೆಂಟ್ ರಸ್ತೆಯಲ್ಲಿ ನೀರಿನ ವಾಲ್ವ್‌ಗಳು ರಸ್ತೆ ಮಟ್ಟಕ್ಕಿಂತ ಮೇಲೆ ಇರುತ್ತದೆ.
   - ಎ.ಜಿ.ಎಸ್ ಲೇಔಟ್ 3ನೇ ಮುಖ್ಯರಸ್ತೆಯಲ್ಲಿ ಬೋರ್‌ವೆಲ್ ಹಾಳಾಗಿದ್ದು, ರಿಪೇರಿ ಮಾಡಲು ತಿಳಿಸಿರುತ್ತಾರೆ.

   ಈ ಬಗ್ಗೆ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಂಗಳೂರು ಕುಡಿಯುವ ನೀರು ಮತ್ತು ಒಳಚರಂಡಿ ಮಂಡಳಿ ರವರಿಗೆ ಸೂಚಿಸಿರುತ್ತಾರೆ.

Scanned with CamScanner

2. **ಬೆಸ್ಕಾಂ ಇಲಾಖೆಗೆ ಸಂಬಂಧಪಟ್ಟಂತೆ.**

- ಫಾರ್ಮ್‌ಸ್ಪ್ರಿಂಗ್ ಬಡಾವಣೆ 5ನೇ ಅಡ್ಡರಸ್ತೆ ಮುಂಭಾಗದಲ್ಲಿನ ಕಂಬವು ವಾಲಿದ್ದು, ಇದನ್ನು ಸರಿಪಡಿಸಬೇಕೆಂದು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ ಇಲಾಖೆ ರವರಿಗೆ ಸೂಚಿಸಿರುತ್ತಾರೆ.

3. **ಬೀದಿ ದೀಪಗಳ ನಿರ್ವಹಣೆಗೆ ಸಂಬಂಧಪಟ್ಟಂತೆ.**

- ಪೂರ್ಣಪ್ರಜ್ಞಾ ಬಡಾವಣೆಯ ದೂರುಗಳನ್ನು ತ್ವರಿತವಾಗಿ ಪರಿಹರಿಸಲು ಕೋರಿರುತ್ತಾರೆ.
- ಬೀದಿ ದೀಪಗಳು ಬೆಳಿಗ್ಗೆ ಸಮಯದಲ್ಲಿ ಉರಿಯುತ್ತಿದ್ದು, ಟೈಮರ್‌ಗಳು ಕಳಪೆ ಗುಣಮಟ್ಟದ್ದಾಗಿರುವುದರಿಂದ ಈ ದೂರು ಬಂದಿದ್ದು, ಒಟ್ಟು ಅಳವಡಿಸಿದ ಸುಮಾರು 200 ಟೈಮರ್‌ಗಳಲ್ಲಿ 70-80 ಟೈಮರ್‌ಗಳು ಹಾಳಾಗಿರುವ ಬಗ್ಗೆ ದೂರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯಲ್ಲಿ ಒಟ್ಟು 13 ಟೈಮರ್‌ಗಳು ಹಾಳಾಗಿರುವ ಬಗ್ಗೆ ದೂರಿರುತ್ತಾರೆ.
- ಜಯನಗರ ಹೆಚ್.ಬಿ.ಸಿ.ಎಸ್ ಬಡಾವಣೆ ಐಯ್ಯಂಗಾರ್ ಬೇಕರಿ ಸರ್ಕಲ್ ಹತ್ತಿರದ ಹೈ-ಮಾಸ್‌ನ 2 ಲೈಟ್‌ಗಳು ಹಾಳಾಗಿರುವ ಬಗ್ಗೆ ದೂರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ಎಲೆಕ್ಟ್ರಿಕಲ್ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ.

4. **ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆಗೆ ಸಂಬಂಧಪಟ್ಟಂತೆ**

- ಒಣತ್ಯಾಜ್ಯ ನಿರ್ವಹಣಾ ಘಟಕವು ಸಂಪೂರ್ಣವಾಗಿ ಸ್ಥಗಿತಗೊಂಡಿದ್ದು, ಇದರಿಂದಾಗಿ ಒಣಕಸವನ್ನು ಸಮರ್ಪಕವಾಗಿ ಸಂಗ್ರಹಣೆ ಮಾಡದೇ ಇರುವ ಬಗ್ಗೆ ದೂರಿರುತ್ತಾರೆ.
- ಒಂದೇ ಆಟೋ ಟಿಪ್ಪರ್‌ನಲ್ಲಿ ಹಸಿ ಮತ್ತು ಒಣಕಸವನ್ನು ಒಟ್ಟಾರೆಯಾಗಿ ಸಂಗ್ರಹಿಸುತ್ತಿರುವ ಬಗ್ಗೆ ದೂರಿರುತ್ತಾರೆ.
- ಬಿ.ಡಿ.ಎ 80 ಅಡಿ ರಸ್ತೆಯಲ್ಲಿ ಹಾಗೂ ಪೈಪ್‌ಲೈನ್ ಜಂಕ್ಷನ್ ಬಳಿ ತ್ಯಾಜ್ಯವನ್ನು ರಸ್ತೆಗೆ ಸುರಿಯುತ್ತಿರುವ ಬಗ್ಗೆ ದೂರಿರುತ್ತಾರೆ.
- ಎ.ಜಿ.ಎಸ್ ಬಡಾವಣೆಯಲ್ಲಿ ಸೊಳ್ಳೆ ನಿಯಂತ್ರಣ ಔಷಧಿ ಸಿಂಪಡಣೆ ಮಾಡಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ಹಾಗೂ ಆರೋಗ್ಯ ಪರಿವೀಕ್ಷಕರು ಘನತ್ಯಾಜ್ಯ ವಿಲೇವಾರಿ ಮತ್ತು ನಿರ್ವಹಣೆ ರವರಿಗೆ ಸೂಚಿಸಿರುತ್ತಾರೆ.

5. **ಉತ್ತರಹಳ್ಳಿ ಉಪವಿಭಾಗಕ್ಕೆ ಸಂಬಂಧಪಟ್ಟಂತೆ**

- ಸರ್ವಜ್ಞ ವೃತ್ತ ರಸ್ತೆ, ಜೆ.ಹೆಚ್.ಬಿ.ಎಸ್.ಎಸ್ ಮತ್ತು ಬಿ.ಎಸ್.ಸಿ.ಎಸ್ ಲೇಔಟ್ ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯಿಂದ ಅಗೆದಿರುವ ರಸ್ತೆಗಳಿಗೆ ಮರು ಡಾಂಬರೀಕರಣ ಮಾಡಲು ಕೋರಿರುತ್ತಾರೆ.
- ಫಾಮ್ ಸ್ಪ್ರಿಂಗ್ ಲೇಔಟ್‌ನಲ್ಲಿ ಹೊಸದಾಗಿ ಬೋರ್‌ವೆಲ್ ಕೊರೆಯಲು ಕೋರಿರುತ್ತಾರೆ.
- ಫಾಮ್ ಸ್ಪ್ರಿಂಗ್ ಬಡಾವಣೆಯ ಚರಂಡಿಗಳ ಹೂಳನ್ನು ತೆರವುಗೊಳಿಸಲು ಕೋರಿರುತ್ತಾರೆ.
- ಪೂರ್ಣಪ್ರಜ್ಞಾ ಬಡಾವಣೆಯಲ್ಲಿ ಡಾಂಬರೀಕರಣಗೊಳ್ಳದ ರಸ್ತೆಗಳಿಗೆ ಡಾಂಬರೀಕರಣ ಮಾಡಲು ಕೋರಿರುತ್ತಾರೆ.
- ಪೂರ್ಣಪ್ರಜ್ಞಾ ಬಡಾವಣೆಯಲ್ಲಿ 55 ರಸ್ತೆ ನಾಮಫಲಕಗಳಿಗೆ ಹಾಗೂ ಜಯನಗರ ಹೆಚ್.ಬಿ.ಸಿ.ಎಸ್ 70 ರಸ್ತೆ ನಾಮಫಲಕಗಳಿಗೆ ಮರು ಬಣ್ಣದ ಲೇಪನ ಮಾಡಬೇಕಾಗಿ ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಸಹಾಯಕ ಕಾರ್ಯಪಾಲಕ ಅಭಿಯಂತರರು ಉತ್ತರಹಳ್ಳಿ ಉಪವಿಭಾಗ ರವರಿಗೆ ಸೂಚಿಸಿರುತ್ತಾರೆ

Scanned with CamScanner

6. **ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಬೊಮ್ಮನಹಳ್ಳಿ ವಲಯ ಸಂಬಂಧಪಟ್ಟಂತೆ**

- ಉತ್ತರಹಳ್ಳಿ ಮುಖ್ಯರಸ್ತೆಯಲ್ಲಿ ಅಭಿವೃದ್ಧಿ ಕಾಮಗಾರಿ ನಡೆಯುತ್ತಿದ್ದು, ರಸ್ತೆ ಬದಿಯ ಚರಂಡಿಯ ಮೇಲೆ ಅಲ್ಲಲ್ಲಿ ಸ್ಲ್ಯಾಬ್‌ಗಳು ಇಲ್ಲದೇ ಇರುವುದರಿಂದ ಪಾದಚಾರಿಗಳಿಗೆ ಅನಾನುಕೂಲವಾಗಿದ್ದು, ಕೂಡಲೇ ಕವರಿಂಗ್ ಸ್ಲ್ಯಾಬ್‌ಗಳನ್ನು ಅಳವಡಿಸಲು ಕೋರಿರುತ್ತಾರೆ.
- ಫಾಮ್ ಸ್ಪ್ರಿಂಗ್ ಬಡಾವಣೆ ಮುಖ್ಯರಸ್ತೆಯ 3ನೇ ಮತ್ತು 6ನೇ ಅಡ್ಡರಸ್ತೆ ಜಂಕ್ಷನ್ ಹತ್ತಿರ ಹೆಚ್.ಆರ್.ಪಿ.ಸಿ ಅಳವಡಿಸಲು ಕೋರಿರುತ್ತಾರೆ.

ಈ ಮೇಲಿನ ಎಲ್ಲಾ ಅಂಶಗಳಿಗೆ ಕ್ರಮ ಕೈಗೊಳ್ಳಲು ಮಾನ್ಯ ನೋಡಲ್ ಅಧಿಕಾರಿ ರವರು ಕಾರ್ಯಪಾಲಕ ಅಭಿಯಂತರರು ರಸ್ತೆ ಮೂಲಭೂತ ಸೌಕರ್ಯ ಬೊಮ್ಮನಹಳ್ಳಿ ವಲಯ ರವರಿಗೆ ಸೂಚಿಸಿರುತ್ತಾರೆ

7. **ಕೋವಿಡ್–19ಗೆ ಸಂಬಂಧಪಟ್ಟಂತೆ ಡಾ// ಸುಧಾ, ಪಿ.ಹೆಚ್.ಸಿ ಉತ್ತರಹಳ್ಳಿ ರವರು ಈ ಕೆಳಕಂಡಂತೆ ವಿವರ ನೀಡಿರುತ್ತಾರೆ.**

- ಪ್ರಸ್ತುತ ಉತ್ತರಹಳ್ಳಿ ವಾರ್ಡಿನಲ್ಲಿ ಪ್ರತಿದಿನ 10–15 ಹೊಸ ಪ್ರಕರಣಗಳು ಬೆಳಕಿಗೆ ಬರುತ್ತಿರುತ್ತದೆ.
- ಸದರಿ ಕೊರೋನಾ ಮಹಾಮಾರಿ ತಡೆಗಟ್ಟಲು ತ್ವರಿತವಾಗಿ ಕೊರೋನಾ ರೋಗಿಗಳನ್ನು ಪತ್ತೆ ಹಚ್ಚುವುದು ಅತ್ಯವಶ್ಯಕವಾಗಿರುತ್ತದೆ.
- ವ್ಯಾಕ್ಸಿನೇಷನ್ ಮಾಡಲು ಪ್ರತಿಯೊಬ್ಬರಿಗೆ 1 ರಿಂದ 2 ಗಂಟೆಗಳ ಕಾಲಾವಕಾಶ ತೆಗೆದುಕೊಳ್ಳುತ್ತಿರುತ್ತದೆ.
- ವಾರ್ಡ್ ವ್ಯಾಪ್ತಿಯಲ್ಲಿ ಪ್ರತಿ ಬಡಾವಣೆವಾರು ವ್ಯಾಕ್ಸಿನೇಷನ್ ಸೆಂಟರ್ ನಿರ್ವಹಿಸಲು ಕೋರಿರುತ್ತಾರೆ.

ಈ ಎಲ್ಲಾ ವಿಷಯದ ಬಗ್ಗೆ ಚರ್ಚಿಸಲಾಗಿ ಸೂಕ್ತ ಕ್ರಮ ಕೈಗೊಳ್ಳುವ ನಿರೀಕ್ಷಣೆಯೊಂದಿಗೆ ಸಮಿತಿಯ ಅಧ್ಯಕ್ಷರಾದ ಶ್ರೀಮತಿ ಚೈತ್ರಾ ಹೊನ್ನಾಪುರ ರವರು ಎಲ್ಲರಿಗೂ ವಂದನೆಗಳನ್ನು ಕೋರುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀಮತಿ ಚೈತ್ರಾ ಹೊನ್ನಾಪುರ
ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾನೂನು ಅಧಿಕಾರಿ
ಕೇಂದ್ರ ಕಛೇರಿ

ಶ್ರೀ ನರೇಂದ್ರ ಕುಮಾರ್.ಎ
ಸಂಚಾಲಕರು ಹಾಗೂ ಸ.ಅ–184

Scanned with CamScanner